**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮಂಡ್ಯ**

## ಎಸ್.ಸಿ.ನಂಬರ್‌ಃ 129/2025

| | |
|---|---|
| ಪಿರ್ಯಾದುದಾರರುಃ | ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣೆ |

**-ವಿರುದ್ಧ-**

| | |
|---|---|
| ಆರೋಪಿ | ಅಜಯ್. ಎಸ್. |
| ತಂದೆಯ ಹೆಸರು | ಶಿವಮಲ್ಲಪ್ಪ |
| ವಯಸ್ಸು | ವರುಷ |
| ಉದ್ಯೋಗ | |
| ವಾಸ ಸ್ಥಳ | ಬಾಚನಹಳ್ಳಿ ಗ್ರಾಮ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ. |

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರನ್ವಯ ದಾಖಲಿಸಿಕೊಂಡ ಆರೋಪಿಯ ಹೇಳಿಕೆ**

ಪ್ರಶ್ನೆ 1. ನ್ಯಾಯಾಲಯದಲ್ಲಿ ಅಭಿಯೋಜನದ ಪರವಾಗಿ ವಿಚಾರಣೆಗೊಳಪಟ್ಟ ಪ್ರಾ.ಸಾ-1 ರಿಂದ ಪ್ರಾ.ಸಾ-10 ರವರ ಸಾಕ್ಷ್ಯಗಳನ್ನು ಕೇಳಿ ತಿಳಿದುಕೊಂಡಿರುವಿರಾ?

ಉತ್ತರ :

ಪ್ರಶ್ನೆ 2. ಪ್ರಾ.ಸಾ-5/ನಂಜುಂಡಸ್ವಾಮಿ ರವರು ತಮ್ಮ ಸಾಕ್ಷ್ಯದಲ್ಲಿ ಇವತ್ತಿಗೆ ಸುಮಾರು ಒಂದು ವರುಷದ ಹಿಂದೆ ಶಿವಮಲ್ಲಪ್ಪ ಮೃತಪಟ್ಟಿದ್ದಾರೆ ಮತ್ತು ಮಳವಳ್ಳಿ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಪೊಲೀಸರು ಶಿವಮಲ್ಲಪ್ಪನ ಶವ ತನಿಖೆ ಮಾಡಿ ಮಹಜರು ತಯಾರಿಸಿದಾಗ ನಿಪಿ-9(ಎ) ರಲ್ಲಿ ಗುರುತಿಸಿರುವ ಸಹಿ ಮಾಡಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 3. ಪ್ರಾ.ಸಾ-6/ಡಾ.ಅಶ್ವಿನ್ ನಾರಾಯಣಸ್ವಾಮಿ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 31.07.2025 ರಂದು ಮಳವಳ್ಳಿ ಗ್ರಾಮಾಂತರ ಪೊಲೀಸರ ಕೋರಿಕೆಯ ಮೇರೆಗೆ ಯುಡಿಆರ್ ಸಂಖ್ಯೆ.18/2025 ರಲ್ಲಿ ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 1.30 ರವರೆಗೆ ಸುಮಾರು 60 ವರ್ಷ ವಯಸ್ಸಿನ ಶಿವಮಲ್ಲಪ್ಪ ರವರ ಶವದ ಮರಣೋತ್ತರ ಪರೀಕ್ಷೆ ನಡೆಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 4. ಪ್ರಾ.ಸಾ-6 ರವರು ತಮ್ಮ ಸಾಕ್ಷ್ಯದಲ್ಲಿ PM ವರದಿಯಲ್ಲಿ ದೇಹವನ್ನು ತ್ಯಜಿಸುವ ಮೊದಲು ಮತ್ತು ನಂತರ ಗಮನಿಸಲಾದ ಬಾಹ್ಯ ಗಾಯಗಳು ಮತ್ತು ಆಂತರಿಕ ಗಾಯಗಳನ್ನು ನಾನು ಗಮನಿಸಿದ್ದೇನೆ ಮತ್ತು ನನ್ನ ಅಭಿಪ್ರಾಯದಲ್ಲಿ ಶಿವಮಲ್ಲಪ್ಪನ ಸಾವು ಕುತ್ತಿಗೆಯನ್ನು ಒತ್ತಿದ ಪರಿಣಾಮವಾಗಿ ಉಸಿರುಕಟ್ಟುವಿಕೆಯಿಂದ ಉಂಟಾಗಿದೆ ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 5. ಪ್ರಾ.ಸಾ-6 ರವರು ತಮ್ಮ ಸಾಕ್ಷ್ಯದಲ್ಲಿ ನಾನು ಶಿವಮಲ್ಲಪ್ಪನ ದೇಹದ ಮೇಲೆ ಈ ಕೆಳಗಿನ ಬಾಹ್ಯ ಗಾಯಗಳನ್ನು ಗಮನಿಸಿದ್ದೇನೆ a) ಎಡ ಕೆಳಗಿನ ಕುತ್ತಿಗೆಯ ಮೇಲೆ ಮಧ್ಯನಾಳೀಯ ರೇಖೆಯಿಂದ ಅಡ್ಡಲಾಗಿ 4 ಸೆಂ.ಮೀ ಮೇಲೆ 9 ಸೆಂ.ಮೀ X 2 ಸೆಂ.ಮೀ. ಇರುವ ಮೂಗೇಟುಗಳ ಸವೆತ, b) ಕುತ್ತಿಗೆಯ ಬಲಭಾಗದಲ್ಲಿ 1 ಸೆಂ.ಮೀ X 1 ಸೆಂ.ಮೀ. ಇರುವ ಸಣ್ಣ ಮೂಗೇಟುಗಳ ಸವೆತ, ಬಲ ಮಧ್ಯನಾಳೀಯ ಪ್ರದೇಶದಿಂದ 3 ಸೆಂ.ಮೀ. ಕೆಳಗೆ ಕಾಣುತ್ತಿದೆ, c) ಎಡಗಣ್ಣಿನ ಕೆಳಗೆ ಮತ್ತು ಎಡಭಾಗದಲ್ಲಿರುವ ಉಪ-ಮಧ್ಯನಾಳೀಯ ಪ್ರದೇಶದ ಮೇಲೆ ಮೂರು ಬೆರಳಿನ ಉಗುರುಗಳ ಗೀರುಗಳ ಸವೆತಗಳು ಒಂದರ ಕೆಳಗೆ ಕಂಡುಬರುತ್ತವೆ, ಒಂದು ಕೆಳಗೆ ಮತ್ತು ಇನ್ನೊಂದು ಕೆಳಗೆ ಸುಮಾರು 0.3 ರಿಂದ 0.5 ಸೆಂ.ಮೀ

ದೂರದಲ್ಲಿ ಇದೆ ಮತ್ತು e) ಮಧ್ಯದ ಬೆನ್ನಿನ ಪ್ರದೇಶದಲ್ಲಿ 10 ಸೆಂ.ಮೀ X 5 ಸೆಂ.ಮೀ. ಇರುವ ಮೂಗೇಟುಗಳ ಸವೆತ ಕಂಡುಬಂದಿದೆ ಮತ್ತು ರಕ್ತ ಹೊರಹೋಗಿರುತ್ತದೆ ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 6. ಪ್ರಾ.ಸಾ-6 ರವರು ತಮ್ಮ ಸಾಕ್ಷ್ಯದಲ್ಲಿ ದಿಃ31.07.2025 ರಂದು ನಾನು ಪೊಲೀಸರಿಗೆ PM ವರದಿಯನ್ನು ನೀಡಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 7. ಪ್ರಾ.ಸಾ-6 ರವರು ತಮ್ಮ ಸಾಕ್ಷ್ಯದಲ್ಲಿ FSL ವರದಿ, PM ವರದಿ, 14.08.2025 ರ ಹಿಸ್ಟೋಪಾಥಾಲಜಿ ವರದಿ ಮತ್ತು 28.08.2025 ರ FSL ವರದಿ ಸಂಖ್ಯೆ 2261 ಗಳನ್ನು ಪರಿಶೀಲಿಸಿದ ನಂತರ ಶಿವಮಲ್ಲಪ್ಪ ರವರ ಸಾವಿನ ಕುರಿತು ಅಂತಿಮ ವರದಿಯನ್ನು ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 8. ಪ್ರಾ.ಸಾ-7/ಗಂಗಾಧರ.ಜೆ. ಎ. ರವರು ತಮ್ಮ ಸಾಕ್ಷ್ಯದಲ್ಲಿ ದಿಃ30.07.02025 ರಂದು ನಾನು ಠಾಣಾಧಿಕಾರಿಯಾಗಿದ್ದಾಗ ಬೆಳಿಗ್ಗೆ 10.00 ಗಂಟೆಗೆ ಸುನಂದಮ್ಮ ಕೋಂ ಶಿವಮಲ್ಲಪ್ಪ ರವರು ಠಾಣೆಗೆ ಬಂದು ನನ್ನ ಕೈಗೆ ನಿಪಿ-2 ರಲ್ಲಿ ಗುರುತಿಸಿರುವ ದೂರನ್ನು ಕೊಟ್ಟ ಆಧಾರದ ಮೇಲೆ UDR 18/2025 ನೇ ಪ್ರಕರಣವನ್ನು ದಾಖಲಿಸಿ ನಿಪಿ-1 ರಲ್ಲಿ ಗುರುತಿಸಿರುವ ವರದಿಯ ಅಸಲು ಪ್ರತಿಯನ್ನು ಮಳವಳ್ಳಿ ತಹಶೀಲ್ದಾರ್ ರವರಿಗೆ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 9. ಪ್ರಾ.ಸಾ-8/ಶಿವಾನಂದ ಸ್ವಾಮಿ ರವರು ತಮ್ಮ ಸಾಕ್ಷ್ಯದಲ್ಲಿ ನಾನು 30.07.2025 ರಂದು UDR 18/2025 ನೇ ಪ್ರಕರಣದ ಕಡತವನ್ನು ಚಾಸಾ-30 ನೇ ASI ಗಂಗಾಧರ ರವರಿಂದ ಪಡೆದ ನಂತರ ದಿಃ30.07.2025 ರಂದು ಮಳವಳ್ಳಿ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಮಧ್ಯಾಹ್ನ 1.00 ಗಂಟೆಯಿಂದ 3.00 ಗಂಟೆಯವರೆಗೆ ಪಂಚರಾದ ನಂಜುಂಡಸ್ವಾಮಿ, ಸುನಿಲ್ ಕುಮಾರ ಮತ್ತು ಮೋಹನ್ ರವರ ಸಮಕ್ಷಮ 60 ವರುಷ ಪ್ರಾಯದ ಶಿವಮಲ್ಲಪ್ಪ ರವರ ಶವ ತನಿಖೆ ಮಾಡಿ ಶವದ ಫೋಟೋಗಳನ್ನು ತೆಗೆಸಿ ವನಿತಾ ಕೋಂ ರಂಜನ್, ಸುಭಾಷ್ ಭರಣಿ ಬಿನ್ ಗೋವಿಂದ ರಾಜು ರವರ ಹೇಳಿಕೆಗಳನ್ನು ದಾಖಲಿಸಿಕೊಂಡು ನಿಪಿ-9 ರಲ್ಲಿ ಗುರುತಿಸಿರುವ ಶವ ತನಿಖೆ ಮಹಜರು ತಯಾರಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 10. ಪ್ರಾ.ಸಾ-8 ರವರು ತಮ್ಮ ಸಾಕ್ಷ್ಯದಲ್ಲಿ ಶವ ತನಿಖೆ ಮಹಜರು ತಯಾರಿಸಿದ ನಂತರ ಮಂಡ್ಯ MIMS ಆಸ್ಪತ್ರೆಯ ವೈದ್ಯರಿಂದ ಶವ ಪರೀಕ್ಷೆ ಮಾಡಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 11. ಪ್ರಾ.ಸಾ-9/ಶ್ರೀಧರ.ಬಿ.ಎಸ್ ರವರು ತಮ್ಮ ಸಾಕ್ಷ್ಯದಲ್ಲಿ ಮಂಡ್ಯ ಜಿಲ್ಲಾ SP ರವರ ಆದೇಶದ ಪ್ರಕಾರ ದಿಃ13.08.2025 ರಂದು ಈ ಪ್ರಕರಣದ ಕಡತವನ್ನು ಚಾಸಾ-1 ನೇ ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣೆಯ PI ರವರಾದ ಮಹೇಶ ರವರಿಂದ ಪಡೆದ ನಂತರ ತನಿಖೆ ಕಾಲದಲ್ಲಿ ಮಹದೇವ ಸ್ವಾಮಿ, ವಿನುತಾ, ರಂಜನ್, ವನಿತಾ, ಶಿವಕುಮಾರ, ಕುಮಾರ, ಮಹದೇವು,

ಕೆಂಪರಾಜು, ರೇವಣ್ಣ ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 12. ಪ್ರಾ.ಸಾ-9 ರವರು ತಮ್ಮ ಸಾಕ್ಷ್ಯದಲ್ಲಿ ನಾನು ತನಿಖೆ ಕಾಲದಲ್ಲಿ ನಿಪಿ-13, 14 ಮತ್ತು 12 ರಲ್ಲಿ ಗುರುತಿಸಿರುವ RFSL ವರದಿ, histopathology ವರದಿಗಳನ್ನು ಪಡೆದಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 13. ಪ್ರಾ.ಸಾ-9 ರವರು ತಮ್ಮ ಸಾಕ್ಷ್ಯದಲ್ಲಿ ನಾನು ನಿಪಿ-11 ರಲ್ಲಿ ಗುರುತಿಸಿರುವ ಪತ್ರದ ಜೊತೆಯಲ್ಲಿ PM ವರದಿ, histopathology ವರದಿ, RFSL ವರದಿ ಮತ್ತು ಈಗ ನನಗೆ ನ್ಯಾಯಾಲಯದಲ್ಲಿ ತೋರಿಸಿದ PF No.158/2025, 160/2025, 161/2025, 163/2025 ರಲ್ಲಿ ನಮೂದಿಸಿರುವ ವಸ್ತುಗಳನ್ನು MIMS ಆಸ್ಪತ್ರೆಯ ವೈದ್ಯರಿಗೆ ಕಳುಹಿಸಿ ಶಿವಮಲ್ಲಪ್ಪ ರವರ ಮರಣದ ಕಾರಣದ ಕುರಿತು ಅಂತಿಮ ಅಭಿಪ್ರಾಯ ಬರೆದು ಕಳುಹಿಸುವಂತೆ ಕೇಳಿಕೊಂಡಿದ್ದೇನೆ ಮತ್ತು ನನ್ನ ವಿನಂತಿಯ ಪ್ರಕಾರ ವೈದ್ಯರು PM ವರದಿ, histopathology ವರದಿ, RFSL ವರದಿ ಮತ್ತು ವಸ್ತುಗಳನ್ನು ಪರಿಶೀಲನೆ ಮಾಡಿ ಶಿವಮಲ್ಲಪ್ಪ ರವರ ಮರಣದ ಕಾರಣವನ್ನು PM ವರದಿಯ 4 ನೇ ಪುಟದಲ್ಲಿ ಬರೆದು ಕಳುಹಿಸಿದ್ದಾರೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 14. ಪ್ರಾ.ಸಾ-9 ರವರು ತಮ್ಮ ಸಾಕ್ಷ್ಯದಲ್ಲಿ ನಾನು ತನಿಖೆ ಕಾಲದಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳಿಂದ ನಿಪಿ-27 ರಲ್ಲಿ ಗುರುತಿಸಿರುವ ಪತ್ರ, ಕೃತ್ಯ ನಡೆದ ಸ್ಥಳಕ್ಕೆ ಸಂಬಂಧಿಸಿದ RTC ದಾಖಲೆ ಮತ್ತು PWD

ಅಧಿಕಾರಿಗಳಿಂದ ನಿಪಿ.28 ರಲ್ಲಿ ಗುರುತಿಸಿರುವ ಪತ್ರ ಮತ್ತು ನಕಾಶೆಗಳನ್ನು ಪಡೆದಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 15. ಪ್ರಾ.ಸಾ-9 ರವರು ತಮ್ಮ ಸಾಕ್ಷ್ಯದಲ್ಲಿ ಈಗ ನ್ಯಾಯಾಲಯದಲ್ಲಿ ನನಗೆ ತೋರಿಸಿದ 2 ಕವರುಗಳಲ್ಲಿ ಇರುವ ವಸ್ತುಗಳನ್ನು, ಒಂದು ಡಬ್ಬಿಯಲ್ಲಿರುವ ವಸ್ತುವನ್ನು, 5 ಬಟ್ಟೆಯ ಗಂಟುಗಳಲ್ಲಿ ಇರುವ ವಸ್ತುಗಳನ್ನು ತನಿಖೆ ಕಾಲದಲ್ಲಿ ಸಂಗ್ರಹಿಸಿದ್ದೇನೆ ಮತ್ತು ದಿಃ29.10.2025 ರಂದು ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 16. ಪ್ರಾ.ಸಾ-10/ಮಹೇಶ.ಬಿ.ಜಿ. ರವರು ತಮ್ಮ ಸಾಕ್ಷ್ಯದಲ್ಲಿ ನಾನು 31.07.2025 ರಂದು UDR 18/2025 ನೇ ಪ್ರಕರಣದ ಕಡತವನ್ನು ಚಾಸಾ-32 ನೇ ASI ಶಿವಾನಂದ ಸ್ವಾಮಿ ರವರಿಂದ ಪಡೆದಿದ್ದೇನೆ ಮತ್ತು 31.07.2025 ರಂದು ನನ್ನ ಕೈಗೆ ಚಾಸಾ-32 ನೇ ASI ಶಿವಾನಂದ ಸ್ವಾಮಿ ರವರು ಶವ ತನಿಖಾ ವರದಿ ಮತ್ತು ಶವ ಪರೀಕ್ಷಾ ವರದಿಗಳನ್ನು ಕೊಟ್ಟರು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 17. ಪ್ರಾ.ಸಾ-10 ರವರು ತಮ್ಮ ಸಾಕ್ಷ್ಯದಲ್ಲಿ ನನಗೆ ಶವ ಪರೀಕ್ಷಾ ವರದಿ ಮತ್ತು ಶವ ತನಿಖಾ ವರದಿಯನ್ನು ಓದಿದಾಗ ಮೃತ ಶಿವಮಲ್ಲಪ್ಪ ಕುತ್ತಿಗೆ ಒತ್ತಿದ್ದರಿಂದ ಮೃತಪಟ್ಟಿದ್ದಾನೆ ಎಂದು ಅನ್ನಿಸಿತು, ಆದ್ದರಿಂದ ನನ್ನ ಅಭಿಪ್ರಾಯದ ವರದಿಯನ್ನು ತಯಾರಿಸಿ ಆರೋಪಿಯ ವಿರುದ್ಧ BNS ಕಲಂ 103 ಅನ್ವಯ ದಂಡಿಸಲ್ಪಡುವ ಅಪರಾಧಗಳಿಗೆ 133/2025 ನೇ ಪ್ರಕರಣವನ್ನು

ದಾಖಲಿಸಿ ನಿಪಿ-31 ರಲ್ಲಿ ಗುರುತಿಸಿರುವ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 18. ಪ್ರಾ.ಸಾ-10 ರವರು ತಮ್ಮ ಸಾಕ್ಷ್ಯದಲ್ಲಿ ನನ್ನ ಸೂಚನೆ ಪ್ರಕಾರ 31.07.2025 ರಂದು ಸಂಜೆ 7.00 ಗಂಟೆಗೆ ನಮ್ಮ ಠಾಣಾ ಸಿಬ್ಬಂದಿ ಆರೋಪಿಯನ್ನು ನನ್ನ ಸಮಕ್ಷಮ ಹಾಜರು ಪಡಿಸಿದರು ಮತ್ತು ನಾನು ಆರೋಪಿಯನ್ನು ದಸ್ತಗಿರಿ ಮಾಡಿ ಆತ ಹೇಳಿದ ವಿಚಾರಗಳನ್ನು ದಾಖಲಿಸಿಕೊಂಡಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 19. ಪ್ರಾ.ಸಾ-10 ರವರು ತಮ್ಮ ಸಾಕ್ಷ್ಯದಲ್ಲಿ ನಾನು 31.07.2025 ರಂದು ತನಿಖೆ ನಡೆಸುವಾಗ ಪಂಚರಾಗಿ ಕೆಲಸ ಮಾಡುವಂತೆ ನಾಗರಾಜು ಮತ್ತು ಸ್ವಾಮಿ ರವರಿಗೆ ನಿಪಿ-15 ರಲ್ಲಿ ಗುರುತಿಸಿರುವ ನೋಟೀಸು ಜಾರಿ ಮಾಡಿ ಠಾಣೆಗೆ ಕರೆಸಿಕೊಂಡು ರಾತ್ರಿ 8.15 ಗಂಟೆಗೆ ಪಂಚರಾದ ನಾಗರಾಜು ಮತ್ತು ಸ್ವಾಮಿ ರವರ ಸಮಕ್ಷಮ ಆರೋಪಿ ಅಜಯ್ ಹೇಳಿ ತೋರಿಸಿದ ಬ್ಯಾಡರಹಳ್ಳಿ ಗ್ರಾಮದಲ್ಲಿ ಆತನ ತಂದೆ ತಾಯಿ ವಾಸವಾಗಿದ್ದ ಕೃತ್ಯ ನಡೆಸಿದ ಸ್ಥಳವನ್ನು ತನಿಖೆ ಮಾಡಿ ಫೋಟೋ ತೆಗೆಸಿ ನಿಪಿ-16 ರಲ್ಲಿ ಗುರುತಿಸಿರುವ ಮಹಜರು ತಯಾರಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 20. ಪ್ರಾ.ಸಾ-10 ರವರು ತಮ್ಮ ಸಾಕ್ಷ್ಯದಲ್ಲಿ ನಾನು 31.07.2025 ರಂದು ಸ್ಥಳ ಮಹಜರು ತಯಾರಿಸಿದ ನಂತರ ಆರೋಪಿಯನ್ನು ವೈದ್ಯರಿಂದ ಪರೀಕ್ಷೆ ಮಾಡಿಸಿ ಆತನ ಬೆರಳಿನ ಉಗುರುಗಳನ್ನು ವೈದ್ಯರಿಂದ ತೆಗೆಸಿ

ಸಂಗ್ರಹಿಸಿದ್ದೇನೆ ಮತ್ತು ವೈದ್ಯರಿಂದ ಆರೋಪಿಯ ಬೆರಳಿನ ಉಗುರುಗಳನ್ನು ಪಡೆದ ವಿಚಾರವನ್ನು PF No. 161/2025 ರಲ್ಲಿ ನಮೂದಿಸಿ 01.08.2025 ರಂದು ನ್ಯಾಯಾಲಯಕ್ಕೆ ವರದಿ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 21. ಪ್ರಾ.ಸಾ-10 ರವರು ತಮ್ಮ ಸಾಕ್ಷ್ಯದಲ್ಲಿ ನಾನು 02.08.2025 ರಂದು ಸುನಂದಮ್ಮ, ಉಮೇಶ, ಸುರೇಶ, ಶಿವಕುಮಾರ, ಬಾಣಪ್ಪ, ಕೌಶಿಕ್, ಮಣಿಕಂಠ ಮತ್ತು ರಾಜೇಶ ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ ಮತ್ತು ನಾನು ತನಿಖೆ ಕಾಲದಲ್ಲಿ ವಶಪಡಿಸಿಕೊಂಡಿದ್ದ ಎಲ್ಲಾ ವಸ್ತುಗಳನ್ನು 13.08.2025 ರಂದು ಮೈಸೂರು RFSL ಕಛೇರಿಗೆ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 22. ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಇದೆಯೇ?

ಉತ್ತರ :

ಪ್ರಶ್ನೆ 23. ಹೇಳುವುದು ಇನ್ನೇನಾದರೂ ಇದೆಯೇ?

ಉತ್ತರ :

(ಮೇಲ್ಕಂಡ ಪ್ರಶ್ನೆಗಳನ್ನು ನಾನೇ ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ, ಹೇಳಿ, ಅವರು ಕೊಟ್ಟ ಉತ್ತರಗಳನ್ನು ನಾನೇ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸುತ್ತೇನೆ)

**(ಸುಬ್ರಮಣ್ಯ. ಜೆ.ಎನ್)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.

ದಿನಾಂಕ: **16.04.2026.**